ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಶ್ರೀ ಮೋಹನ್ ಭಾಗವತ್ ಅವರು ಕೇರಳದ ಶ್ರೀ ಮಾತಾ ಅಮೃತಾನಂದಮಯಿ ಅವರ ಆಶ್ರಮಕ್ಕೆ ಭೇಟಿ ನೀಡಿ ಮಾತಾ ಅಮೃತಾನಂದಮಯಿ ಅವರೊಂದಿಗೆ ಚರ್ಚೆ ನಡೆಸಿದರು.

ಸಂಪುಟ : 44 ಸಂಚಿಕೆ : 12 ಶುಭಕೃತ್ – ಆಶ್ವಯುಜ ಕಲಿಯುಗಾಬ್ದ 5124 01–10–2022 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

## ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣಾ ಕಾಯ್ದೆ – ಹಿಂದೂ ಧರ್ಮದುಳಿವೋ? ಮತಾಂತರದೊಲವೋ?

ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆ ಹಕ್ಕು ಕಾಯ್ದೆ 2021, ಇದನ್ನು ಸೆಪ್ಟೆಂಬರ್ 15, 2022ರಂದು ಗೃಹ ಸಚಿವರಾದ ಆರಗ ಜ್ಞಾನೇಂದ್ರರವರು ವಿಧಾನ ಪರಿಷತ್ತಿನಲ್ಲಿ ಮಂಡನೆಯನ್ನು ಮಾಡಿದ್ದುದಲ್ಲದೆ ಧ್ವನಿ ಮತದ ಮೂಲಕ ವಿಧೇಯಕಕ್ಕೆ ಅಂಗೀಕಾರವು ಸಿಕ್ಕಿತು. ರಾಜ್ಯಪಾಲರು ರುಜು ಹಾಕಿರುವುದಷ್ಟೇ, ಅಧಿಕೃತ ಜ್ಞಾಪನವನ್ನು ಹೊರಡಿಸಿದರೆ ವಿಧೇಯಕವು ಕಾಯ್ದೆಯಾಗುತ್ತದೆ.

ಮತಾಂತರ ನಿಷೇಧ ಕಾಯ್ದೆ ಎಂದೇ ಹೆಸರನ್ನು ಪಡೆದಿರುವ ಈ ಕಾಯ್ದೆಯ ಬಗೆಗೆ ಒಂದಿಷ್ಟು ಮಾತನಾಡೋಣ.

### ಮತಾಂತರವೆಂದರೇನು?

ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ 2021ರ ಕಲಂ 2(c) ಹೇಳುವಂತೆ "ಮತಾಂತರ ಎಂದರೆ ಯಾರೇ ವ್ಯಕ್ತಿಯು ತನ್ನ ಸ್ವಂತ ಧರ್ಮವನ್ನು ತ್ಯಜಿಸಿ ಮತ್ತೊಂದು ಧರ್ಮವನ್ನು ಅಳವಡಿಸಿಕೊಳ್ಳುವುದು"

ವಿಶ್ವಕೋಶ 2022ರ ಪ್ರಕಾರ "ಒಬ್ಬ ವ್ಯಕ್ತಿ ಅಥವಾ ಸಂಸ್ಥೆಯು ಇತರ ಜನರಿಗೆ ಒಂದು ಕಾರಣ, ಸಿದ್ಧಾಂತ ಅಥವಾ ಧರ್ಮವನ್ನು ಅನುಸರಿಸಲು ಅಥವಾ ಬೆಂಬಲಿಸಲು ಮನವೊಲಿಸುವ ನಿಟ್ಟಿನಲ್ಲಿ ಪ್ರಯತ್ನಿಸುವ ನಿರ್ಣಯ ಅಥವಾ ಉತ್ಸಾಹ".

ಮತಾಂತರದಲ್ಲಿ ಎರಡು ಬಗೆಯನ್ನು ಕಾಣಬಹುದು ಒಂದು ರಾಜಕೀಯ ಮತಾಂತರ ಮತ್ತೊಂದು ಧಾರ್ಮಿಕ ಮತಾಂತರ.

ಇದರಲ್ಲಿ ರಾಜಕೀಯ ಮತಾಂತರವು ನಮಗೆಲ್ಲಾ ಗೊತ್ತೇ ಇದೆ. ಪ್ರಸ್ತುತ ಇಲ್ಲಿ ನಾವು ಮಾತನಾಡಲು ಹೊರಟಿರೋದು ಧಾರ್ಮಿಕ ಮತಾಂತರದ ಬಗ್ಗೆ.

ನಾವು ಈವರೆಗೆ ನಂಬಿಕೊಂಡು ಆಚರಿಸಿಕೊಂಡು ಬಂದಿರುವಂತಹ ಮತವನ್ನು ಬಿಟ್ಟು ಅನ್ಯ ಮತವನ್ನು ಅನುಸರಿಸುವ ಅಪ್ಪಿಕೊಳ್ಳುವ ತನ್ಮೂಲಕ ತನ್ನ ಅಸಲಿ ಮತದ ಜೊತೆಗೆ ಅಂತರವನ್ನು ಕಾಪಾಡಿಕೊಳ್ಳುವುದು ಮತಾಂತರವೆನಿಸುತ್ತದೆ.

ಸ್ವ ಇಚ್ಛೆಯಿಂದ ಆಗುವ ಮತಾಂತರಕ್ಕಲ್ಲ, ಈ ಸಮಾಜದ ಅಥವಾ ಕಾನೂನಿನ ವಿರೋಧ, ಹಿಂದೂವೇತರ ಧಾರ್ಮಿಕ ಮತಗಳು ತಮ್ಮ ಧರ್ಮದ ಅನುಯಾಯಿಗಳನ್ನು ಹೆಚ್ಚಿಸುವ ಅಥವಾ ಅವರ ಸಿದ್ಧಾಂತಗಳಿಗೆ ನಂಬಿಕೆಗಳಿಗೆ ನಿಷ್ಠರಾಗುವಂತೆ ಯಾವುದಾದರೂ ರೂಪದಲ್ಲಿ (ಏನ ಕೇನ ಪ್ರಕಾರೇಣ) ಪ್ರಯತ್ನಿಸುವ ಉಪ ಮಾರ್ಗಗಳನ್ನು.

ಒಂದು ಧರ್ಮವು ಲವ್ ಜಿಹಾದ್ ಮುಂತಾದ ದಾರಿಗಳನ್ನು ಹುಡುಕಿದರೆ ಕ್ರಿಶ್ಚಿಯನ್ ಧರ್ಮವು ಬೈಬಲ್‌ನಲ್ಲಿಯೇ ಧಾರ್ಮಿಕ ಮತಾಂತರವನ್ನು ಸುವಾರ್ತಾ ಬೋಧನೆ ಎಂದು ಕರೆಯಲ್ಪಡುತ್ತದೆ. ಇದರಂತೆ ಕ್ರೈಸ್ತರಿಗೆ ಕರ್ತವ್ಯವನ್ನು ಈ ನಿಟ್ಟಿನಲ್ಲಿ ವಿಧಿಸುತ್ತದೆ. ಬೈಬಲ್ಲಿನ ಮತ್ತಾಯ 28: 19–20 ಅಡಿಯಲ್ಲಿ ಹೀಗೆ ಹೇಳುತ್ತದೆ. "... ಆದ್ದರಿಂದ, ಹೋಗಿ ಎಲ್ಲಾ ರಾಷ್ಟ್ರಗಳನ್ನು ಶಿಷ್ಯರನ್ನಾಗಿ ಮಾಡಿ, ತಂದೆ, ಮಗ ಮತ್ತು ಪವಿತ್ರಾತ್ಮದ ಹೆಸರಿನಲ್ಲಿ ಅವರನ್ನು ಬ್ಯಾಪ್ಟಿಸ್ಟ್ ಮಾಡುವುದು; ನಾನು ನಿಮಗೆ ಆಜ್ಞಾಪಿಸಿದ ಎಲ್ಲಾ ವಿಷಯಗಳನ್ನು ಅವರಿಗೆ ಬೋಧಿಸುತ್ತಿದ್ದೇನೆ".

### ಧಾರ್ಮಿಕ ಮತಾಂತರವು ಸಂವಿಧಾನಿಕ ಹಕ್ಕೇ?

ಇಲ್ಲ, ಯಾವುದೇ ಮತಾಂತರವು ಸಂವಿಧಾನದಡಿಯಲ್ಲಿ ಲಭ್ಯವಿರುವ ಮೂಲಭೂತ ಹಕ್ಕಿಗೆ ಸಂಬಂಧಿಸಿದುದ್ದಲ್ಲ.

ಹಾಗಿದ್ದರೆ, "ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಅಧಿನಿಯಮ 2021" ಇದರಲ್ಲಿ ನಮೂದಿಸಲಾಗಿರುವಂತಹ ಪ್ರಮುಖ ಅಂಶಗಳ ಕಡೆ ಗಮನವನ್ನು ಕೊಡೋಣ;

ಇಲ್ಲಿಯ ಕಲಂ 2 ಪರಿಭಾಷೆಗಳು ಎಂಬುದಕ್ಕೆ ವ್ಯಾಖ್ಯಾನವನ್ನು ನೀಡುತ್ತದೆ. ಅತಿ ಮುಖ್ಯವಾದ ಕಲಂ ಆಗಿದ್ದು ಬಹುತೇಕ ಮತಾಂತರಗಳು ಹೇಗೆ ಜರುಗುತ್ತವೆ ಎಂಬುದನ್ನು ಪರೋಕ್ಷವಾಗಿ ಹೆಸರಿಸಿದಂತಿದೆ.

ಕಲಂ 2 a(i) "ಆಮಿಷ" ಪದವನ್ನು ವಿವರಿಸುತ್ತದೆ. ಇದರಂತೆ "ಆಮಿಷ ಎಂಬುದು ಈ ಮುಂದಿನ ಯಾವುದೇ ರೀತಿಯ ಪ್ರಲೋಭನೆ ಒಡ್ಡುವುದನ್ನು ಒಳಗೊಳ್ಳುತ್ತದೆ"

ನಗದುರೂಪದಲ್ಲಾಗಲೀ ಅಥವಾ ವಸ್ತುವಿನ ರೂಪದಲ್ಲಾಗಲೀ ನೀಡುವ ಯಾವುದೇ ಉಡುಗೊರೆ ಪ್ರತಿಫಲ ಸುಲಭ ಹಣ ಅಥವಾ ಬೌತಿಕ ಪ್ರಯೋಜನ, ಯಾವುದೇ ಧಾರ್ಮಿಕ ಸಂಸ್ಥೆಯು ನಡೆಸುವ ಶಾಲೆ ಅಥವಾ ಕಾಲೇಜಿನಲ್ಲಿ ಉದ್ಯೋಗ, ಶಿಕ್ಷಣ; ಅಥವಾ ಮದುವೆಯಾಗುವುದಾಗಿ ವಾಗ್ದಾನ ಮಾಡುವುದು; ಅಥವಾ ಉತ್ತಮ ಜೀವನ ಶೈಲಿ, ದೈವಿಕ ಅ ಸಂತೋಷ ಅಥವಾ ಅನ್ಯಥಾ; ಅಥವಾ ಯಾವುದೇ ಧರ್ಮದ ಅವಿಭಾಜ್ಯ ಅಂಗವಾಗಿರುವ ಪದ್ಧತಿಗಳು, ಸಂಪ್ರದಾಯಗಳು ಅಥವಾ ಆಚರಣೆಗಳನ್ನು ಇನ್ನೊಂದು ಧರ್ಮಕ್ಕೆ ಎದುರಾಗಿ ಧಕ್ಕೆಯಾಗುವ ರೀತಿಯಲ್ಲಿ ಚಿತ್ರಿಸುವುದು ಅಥವಾ ಒಂದು ಧರ್ಮವನ್ನು ಇನ್ನೊಂದು ಧರ್ಮಕ್ಕೆ ವಿರುದ್ಧವಾಗಿ ವೈಭವೀಕರಿಸುವುದು. ಈ ಎಲ್ಲಾ ಅಂಶಗಳು ಆಮಿಷ ಎನಿಸಿಕೊಳ್ಳುತ್ತದೆ.

ಕಲಂ 2(b)ಯ ಪ್ರಕಾರ "ಒತ್ತಾಯ", ಯಾರೇ ವ್ಯಕ್ತಿಯನ್ನು ಶರೀರಿಕ ಹಾನಿ ಉಂಟು ಮಾಡುವ ಅಥವಾ ಅದರ ಬೆದರಿಕೆ ಒಡ್ಡುವ ಮಾನಸಿಕ ಒತ್ತಡ ಅಥವಾ ದೈಹಿಕ ಬಲಪ್ರಯೋಗ ಬಳಸಿ ಆತನ ಇಚ್ಛೆಗೆ ವಿರುದ್ಧವಾಗಿ ಕೆಲಸ ಮಾಡುವಂತೆ ಒತ್ತಾಯಿಸುವುದು

ಹಾಗಿದ್ರೆ ಮತಾಂತರ ಎಂದರೇನು ಎಂಬುದಕ್ಕೂ ಇದೇ ವಿಧೇಯಕ ಉತ್ತರವನ್ನು ನೀಡುತ್ತದೆ ಕಲಂ 2(c) ಯ ಪ್ರಕಾರ "ಮತಾಂತರ" ಅಂದರೆ ಯಾರೇ ವ್ಯಕ್ತಿಯು ತನ್ನ ಸ್ವಂತ ಧರ್ಮವನ್ನು ತ್ಯಜಿಸಿ ಮತ್ತೊಂದು ಧರ್ಮವನ್ನು ಅಳವಡಿಸಿಕೊಳ್ಳುವುದು.

ಯಾವುದೇ ಧಾರ್ಮಿಕ ಮತಾಂತರವು ಬಲವಂತದ್ದಾಗಬಾರದು ಇದು ಕಾನೂನು. ಕಲಂ 2(d) "ಬಲವಂತ" ಪದವನ್ನು ಹೀಗೆ ವ್ಯಾಖ್ಯಾನಿಸುತ್ತದೆ ಅದರಂತೆ "ಬಲವಂತ" ಎಂಬುದು ಮತಾಂತರಗೊಂಡ ಅಥವಾ ಮತಾಂತರಗೊಳ್ಳುವಂತೆ ಕೋರಲಾದ ವ್ಯಕ್ತಿಯ ಮೇಲೆ ಒತ್ತಾಯ ಪ್ರದರ್ಶಿಸುವುದು ಅಂಥ ವ್ಯಕ್ತಿ ಅಥವಾ ಇತರ ಯಾರೇ ವ್ಯಕ್ತಿ ಅಥವಾ ಸ್ವತ್ತಿಗೆ ಯಾವುದೇ ಬಗೆಯ ಹಾನಿ ಉಂಟುಮಾಡುವ ಬೆದರಿಕೆಯನ್ನು ಒಳಗೊಂಡಿರುತ್ತದೆ. ಈ ಭಾಗವನ್ನು ವಿಶೇಷವಾಗಿ ಅವಲೋಕಿಸುವುದಾದರೆ ಇಲ್ಲಿ ಒಡ್ಡುವುದು ಮಾತ್ರ ಎಂಬಂತಿಲ್ಲ ಅದಕ್ಕೆ ಬದಲಾಗಿ "ಒಡ್ಡುವುದೂ ಒಳಗೊಂಡಿರುತ್ತದೆ" ಎಂಬ ಮಾತು ವಿಶ್ಲೇಷಕರ ಅರ್ಥ ವ್ಯಾಪ್ತಿಯನ್ನು ಅವಲಂಬಿಸಿರುತ್ತದೆ ಎಂಬುದು ಯಾರಿಗಾದರೂ ಗೋಚರವಾಗುವ ಸಂಗತಿಯಾಗಿದೆ.

ಇನ್ನು ಕಲಂ 2(ē) "ವಂಚನೆ"ಯನ್ನು ಅರ್ಥೈಸುತ್ತದೆ. ಅದರಂತೆ ಸುಳ್ಳು ಹೆಸರು, ಅಡ್ಡ ಹೆಸರು, ಧಾರ್ಮಿಕ ಸಂಕೇತ ಅಥವಾ ಅನ್ಯಥಾ ವಿಧಾನಗಳ ಮೂಲಕ ಯಾವುದೇ ರೀತಿಯಲ್ಲಿ ಮತ್ತೊಬ್ಬ ವ್ಯಕ್ತಿಯಂತೆ ನಟಿಸುವುದನ್ನು ಒಳಗೊಳ್ಳುತ್ತದೆ.

### ಹಾಗಿದ್ದರೆ ಮತಾಂತರಿಸುವ ಉದ್ದೇಶದಿಂದ ನಾನೇ "ಇಂತಹ" ದೇವರು ಎಂಬ ಸೋಗುತನವನ್ನು ಹಾಕಿಕೊಂಡು ಜನರನ್ನು ತಮ್ಮ ಧರ್ಮದತ್ತ ಏಮಾರಿಸುವ ಕ್ರಿಯೆಯೂ ಒಳಪಡಬಹುದಲ್ಲವೇ?

ಕಲಂ 2 ನಮಗೆ ಇನ್ನಷ್ಟು ಪರಿವಿಡಿಗಳನ್ನು ನೀಡುವುದರ ಜೊತೆಗೆ ಕಲಂ 3 ಹೀಗೆ ಹೇಳುತ್ತದೆ.

"ತಪ್ಪು ನಿರೂಪಣೆ, ಬಲವಂತ, ವಂಚನೆ, ಅನುಚಿತ ಪ್ರಭಾವ, ಒತ್ತಾಯ, ಆಮಿಷ ಒಡ್ಡುವ ಮೂಲಕ ಅಥವಾ ಮದುವೆಯ ವಾಗ್ದಾನದ ಮೂಲಕ ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮಾಡುವ ಮತಾಂತರದ ನಿಷೇಧ"

ಮೇಲ್ಕಂಡ ಎಲ್ಲಾ ಪದಗಳ ನಿರೂಪಣೆಯನ್ನು ನಾವು ಕಲಂ ಎರಡರಲ್ಲಿ ವಿಸ್ತೃತವಾಗಿ ನೋಡಿದ್ದೇವೆ.

ಇಲ್ಲಿ ಬಹು ಮುಖ್ಯವಾದ ಒಂದು ವಿಚಾರವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. 'ಈ ವಿಧೇಯಕವು ಯಾವುದೇ ವ್ಯಕ್ತಿ ತನ್ನ ಮೂಲ ಧರ್ಮಕ್ಕೆ ಮರು ಮತಾಂತರಗೊಳ್ಳುವುದನ್ನು ನಿರ್ಬಂಧಿಸುವುದಿಲ್ಲ'

### ಹಾಗಿದ್ದಲ್ಲಿ ಯಾರು ದೂರನ್ನು ದಾಖಲಿಸಬಹುದು?

ಕಲಂ 4 ಹೇಳುವಂತೆ "ಯಾರೇ ಮತಾಂತರಗೊಂಡ ವ್ಯಕ್ತಿ, ಆತನ ಪಾಲಕರು ಸೋದರ ಸೋದರಿ ಅಥವಾ ಆತನಿಗೆ ರಕ್ತ ಸಂಬಂಧಿ ಮದುವೆ ಅಥವಾ ದತ್ತು ಮೂಲಕ ಸಂಬಂಧಿ ಆದ ಅಥವಾ ಯಾವುದೇ ರೂಪದಲ್ಲಿ ಸಹವರ್ತಿ ಅಥವಾ ಸಹೋದ್ಯೋಗಿ ಯಾದ ಇತರೆ ಯಾರೇ ವ್ಯಕ್ತಿಯು ಕಲಂ ಮೂರರ ಪ್ರಕಾರ ಉಲ್ಲಂಘಿಸುವಂತಹ ಮತಾಂತರದ ಬಗ್ಗೆ ದೂರನ್ನು ದಾಖಲು ಮಾಡಬಹುದು". ಇಲ್ಲಿ 'ಇತರೆ ಯಾರೇ ವ್ಯಕ್ತಿ' ಎಂಬುದು ಸಾಮಾನ್ಯ ವ್ಯಕ್ತಿಯನ್ನು ಒಳಪಟ್ಟಿರುತ್ತದೆ ಅಲ್ಲವೇ?

4ನೇ ಪುಟಕ್ಕೆ...



# ಸಂಸ್ಮರಣೆ

## ಮುತ್ತುಸ್ವಾಮಿ ದೀಕ್ಷಿತರು (24 ಮಾರ್ಚ್ 1775 – 21 ಅಕ್ಟೋಬರ್ 1835)

ಮುತ್ತುಸ್ವಾಮಿ ದೀಕ್ಷಿತರು ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಒಬ್ಬರು. ಇನ್ನಿಬ್ಬರು ತ್ಯಾಗರಾಜರು ಮತ್ತು ಶ್ಯಾಮಾ ಶಾಸ್ತ್ರಿಗಳು. ಬಹುತೇಕ ವಾಗ್ಗೇಯಕಾರರು ತೆಲುಗಿನಲ್ಲಿ ಹೆಚ್ಚು ಕೃತಿಗಳನ್ನು ರಚಿಸಿದ್ದರೆ ದೀಕ್ಷಿತರ ಕೃತಿಗಳೆಲ್ಲವೂ ಸಂಸ್ಕೃತದಲ್ಲಿ ರಚಿತವಾಗಿರುವುದು ಮಹತ್ವದ ವಿಚಾರವಾಗಿದೆ. 'ಗುರುಗುಹ' ಎಂಬ ಕಾವ್ಯನಾಮದ ಹಾಸುಹೊಕ್ಕು ದೀಕ್ಷಿತರ ಕೃತಿಗಳಲ್ಲಿ ಕಂಡುಬರುವುದು ಮತ್ತೊಂದು ಪ್ರಧಾನ ಅಂಶ.


ಕರ್ಣಾಟಕ ಸಂಗೀತದಲ್ಲಿ ಹಂಸಧ್ವನಿಯಲ್ಲಿರುವ 'ವಾತಾಪಿ ಗಣಪತಿಂ ಭಜೇ' ಕೃತಿಯನ್ನು ಅರಿಯದವರೇ ಇಲ್ಲ. ಅಂತಹ ಅಸಂಖ್ಯಾತ ಮಹಾನ್ ಕೃತಿಗಳ ಕರ್ತಾರರಾದವರು ಮುತ್ತುಸ್ವಾಮಿ ದೀಕ್ಷಿತರು. ಇವರ ಸಂಗೀತ ಶೈಲಿಯನ್ನು ನಾರಿಕೇಳಪಾಕಕ್ಕೆ ಹೋಲಿಸಲಾಗುತ್ತದೆ. ತೆಂಗಿನಕಾಯಿಯಲ್ಲಿ, ಹೇಗೆ ಹೊರಗೆ ಕಠಿಣವಾದ ಕರಟವಿದ್ದು ಒಳಗೆ ಸವಿಯಾದ ಎಳನೀರೂ, ರುಚಿಯಾದ ಕಾಯಿಯೂ ಇರುತ್ತದೋ ಅದೇ ರೀತಿ, ಮೇಲ್ನೋಟಕ್ಕೆ ಇವರ ಕೃತಿಗಳು ಕಠಿಣವಾಗಿ ತೋರಿದರೂ, ಅವುಗಳಲ್ಲಿನ ಸಂಗೀತ ಸಾಹಿತ್ಯದ ಅಂಶಗಳಿಂದಾಗಿ, ಅವರ ಅತಿ ಉತ್ತಮ ದರ್ಜೆಯ ವಾಗ್ಗೇಯಕಾರತ್ವಕ್ಕೆ ನಿದರ್ಶನವಾಗಿವೆ.

ದೀಕ್ಷಿತರು ಜನಿಸಿದ ದಿನ ಮಾರ್ಚ್ 24, 1775. ಮುತ್ತುಸ್ವಾಮಿ ದೀಕ್ಷಿತರ ಪೂರ್ವಜರು ತಮಿಳುನಾಡು ಆಂಧ್ರಪ್ರದೇಶಗಳ ಗಡಿ ಪ್ರದೇಶವಾದ ವಿರಿಂಚಿಪುರಂನಲ್ಲಿದ್ದವರು. ದೀಕ್ಷಿತರ ತಂದೆ ರಾಮಸ್ವಾಮಿ ದೀಕ್ಷಿತರೂ ಮಹಾನ್ ಮೇಧಾವಿ ಸಂಗೀತ ವಿದ್ವಾಂಸರು. ತಮ್ಮ ಜೀವನಕಾಲದಲ್ಲಿ ಹಲವಾರುಕಡೆ ಪ್ರಯಾಣಿಸಿ, ಹಲವೆಡೆ ವಾಸಿಸಿ, ಕೊನೆಗೆ ತಿರುನಲ್ವೇಲಿ ಬಳಿಯ ಎಟ್ಟಯಪುರಮ್‌ನ ಆಸ್ಥಾನದಲ್ಲಿ ಆಶ್ರಯ ಪಡೆದವರು. ಮುತ್ತುಸ್ವಾಮಿ ದೀಕ್ಷಿತರು ತಮ್ಮ 16ನೇ ವಯಸ್ಸಿಗೇ ವೇದಾಧ್ಯಯನ, ಕಾವ್ಯಾಲಂಕಾರ, ಜ್ಯೋತಿಷ್ಯ ಶಾಸ್ತ್ರ, ವೈದ್ಯ ಮತ್ತು ಮಂತ್ರಶಾಸ್ತ್ರಗಳಲ್ಲಿ ಪಾಂಡಿತ್ಯ ಪಡೆದಿದ್ದರು.

ತಮ್ಮ ಗುರುಗಳ ಆಣತಿಯಂತೆ ಕಾಶಿಯ ಗಂಗೆಯಲ್ಲಿ ಮಿಂದು ಪ್ರಾರ್ಥಿಸಿದಾಗ ಇವರ ಬೊಗಸೆಯ ನೀರಿನಲ್ಲಿ ವೀಣೆಯ ದರ್ಶನವಾಯಿತಂತೆ. ನಿಷ್ಣಾತ ವೈಣಿಕರಾಗಿದ್ದ ದೀಕ್ಷಿತರು ಪಂಚದಶ ಗಮಕಗಳನ್ನೂ ಪ್ರಯೋಗಮಾಡಿ ತೋರಿಸಿದ್ದರು. ಇವರು ತಿರುತ್ತಣಿಯ ಷಣ್ಮುಖನ ಆರಾಧಕರೂ ಮತ್ತು ಸುಬ್ರಹ್ಮಣ್ಯನನ್ನು ಒಲಿಸಿಕೊಂಡವರೂ ಆಗಿದ್ದರು. ಸ್ವಾಮಿ ಇವರಿಗೆ ವಲ್ಲಿ-ದೇವಯಾನಿ ಸಮೇತ, ಮಯೂರ ವಾಹನನಾಗಿ ಸಾಕ್ಷಾತ್ಕಾರವಿತ್ತಿದ್ದರೆಂಬ ಪ್ರತೀತಿಯಿತ್ತು. ತಾವು ಈ 'ಗುರುಗುಹ'ನ ದಾಸ, ಅವನ ಪಾದಧೂಳಿಯಿಂದ ಅನುಗ್ರಹೀತರಾದರೆಂಬ ಭಕ್ತಿಭಾವದಿಂದ ತಮ್ಮ ಮೊಟ್ಟ ಮೊದಲ ಕೃತಿ "ಶ್ರೀನಾಥಾದಿ ಗುರುಗುಹೋ ಜಯತಿ ಜಯತಿ" ರಚನೆಯನ್ನು ಮಾಯಾ ಮಾಳವಗೌಳ ರಾಗದಲ್ಲಿ ರಚಿಸಿದರು. ಈ ಕೃತಿಯಲ್ಲಿ ಭಗವಂತನ ಚರಣ ಒಂದೇ ಎಲ್ಲದಕ್ಕೂ ಆಶ್ರಯ ಎಂಬ ಪುನೀತಭಾವದ ಅಭಿವ್ಯಕ್ತಿಯಿದೆ.

ದೀಕ್ಷಿತರು ಶ್ರೀವಿದ್ಯೆಯ ಉಪಾಸಕರೂ ಆಗಿದ್ದರು. ಅವರು ರಚಿಸಿದ ಕೃತಿಗಳಲ್ಲಿ ಅವರ ವಿದ್ವತ್ಪೂರ್ಣ ಪಾಂಡಿತ್ಯಗಳ ಅನುಭಾವ ಕಾಣಸಿಗುತ್ತದೆ. ಕೃತಿಗಳಲ್ಲಿ ಅವರು ಅದರ ರಚನೆಯ ರಾಗದ ಹೆಸರನ್ನು ಸಹಾ ಅತ್ಯಂತ ಅರ್ಥಪೂರ್ಣವಾಗಿ ಹೊಂದಿಸಿರುವುದೂ ಕೂಡ ಒಂದು ವಿಶೇಷತೆಯೇ.

ದೀಕ್ಷಿತರು ಅನೇಕ ಚಿಕ್ಕ ಚಿಕ್ಕ ಕೃತಿಗಳನ್ನು ಸಮಷ್ಟಿ ಚರಣಗಳನ್ನೊಳಗೊಂಡಂತೆ ಅದ್ಭುತವಾಗಿ ರಚಿಸಿದ್ದಾರೆ. ದೀಕ್ಷಿತರು ತಮ್ಮ ಕ್ಷೇತ್ರ ಕೃತಿಗಳಲ್ಲಿ ಆಯಾ ಕ್ಷೇತ್ರದ ವಿವರಣೆ, ವಿಶೇಷತೆಯನ್ನು



ಅಳವಡಿಸಿದ್ದಾರೆ. ನವಗ್ರಹ ಕೃತಿಗಳಲ್ಲಿ ಗ್ರಹಗಳ ಪರಿಚಯ ಮತ್ತು ಸ್ಥಾನಗಳನ್ನು ವಿವರಿಸಿದ್ದಾರೆ. ಮೋಕ್ಷ ಸಾಧನೆಗೆ ಕರ್ಮ, ಭಕ್ತಿ ಮತ್ತು ಜ್ಞಾನ ಮಾರ್ಗಗಳನ್ನು ಅನುಸರಿಸಬೇಕೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಶ್ರೀ ಶಂಕರಾಚಾರ್ಯರ ವೇದಾಂತ ಸೂತ್ರಗಳಿಗೆ ಅನುಗುಣವಾಗಿ ಇಡೀ ವಿಶ್ವವು ಮಾಯೆಯಿಂದ ಸೃಷ್ಟಿಸಲ್ಪಟ್ಟಿದೆ, ಪರಮಾತ್ಮನ ಸಾಕ್ಷಾತ್ಕಾರ ನಮ್ಮಲ್ಲಿಯೇ ನಮಗೆ ಆಗಬೇಕಾದರೆ, ನಾವು ಮಾಯೆಯನ್ನು ಜಯಿಸಬೇಕೆಂದು ತೋರಿಸಿದವರು. ದೀಕ್ಷಿತರು ಎಲ್ಲಾ 72 ಮೇಳಕರ್ತ ರಾಗಗಳಲ್ಲೂ ರಚಿಸಿದ್ದಾರೆ.

ಮುತ್ತುಸ್ವಾಮಿ ದೀಕ್ಷಿತರು ಅಸಂಖ್ಯಾತ ಕೀರ್ತನೆಗಳನ್ನು ರಚಿಸಿದ್ದಾರೆ. ಇದುವರೆಗೆ ಗುರುತಿಸಲಾಗಿರುವ ಅವರ ಕೃತಿಗಳ ಸಂಖ್ಯೆಯೇ ಐದು ನೂರಕ್ಕೂ ಹೆಚ್ಚಿನದು. ಮುತ್ತುಸ್ವಾಮಿ ದೀಕ್ಷಿತರ ಕೃತಿಗಳಲ್ಲಿ ಏಕದಂತಂ ಭಜೇಹಂ, ಸಿದ್ಧಿ ವಿನಾಯಕಂ ಅನಿಶಂ, ಶ್ರೀಮಹಾ ಗಣಪತಿರವತುಮಾಂ, ವಾತಾಪಿ ಗಣಪತಿಂ, ಸುಬ್ರಮಣ್ಯೇನ ರಕ್ಷಿತೋಹಂ, ಸ್ವಾಮಿನಾಥ ಪರಿಪಾಲಯಾ ಸುಮಾಂ, ಕಾಮಕೋಟಿ ಪೀಠವಾಸಿನಿ ಸೌಗಂಧಿಂ, ಕಂಜದಳಾಯತಾಕ್ಷಿ ಕಾಮಾಕ್ಷಿ, ಶಿವಕಾಮೇಶ್ವರಿಂ ಚಿಂತಯೇಹಂ, ಶ್ರೀವಿಶ್ವನಾಥಂ ಭಜೇಹಂ, ಮಾಮವ ಪಟ್ಟಾಭಿರಾಮ, ಶ್ರೀ ರಾಮಂ ರವಿ ಕುಲಾಬ್ಧಿ ಸೋಮಂ, ಶ್ರೀರಂಗಪುರವಿಹಾರ, ಶ್ರೀವರಲಕ್ಷ್ಮಿ ನಮಸ್ತುಭ್ಯಂ, ಶ್ರೀ ಸರಸ್ವತಿ ನಮೋಸ್ತುತೆ, ವೀಣಾ ಪುಸ್ತಕಧಾರಿಣಿಂ ಆಶ್ರಯೇ, ಸರಸಿಜನಾಭ ಸೋದರಿ ಶಂಕರಿ ಮುಂತಾದವುಗಳು ಜನಸಾಮಾನ್ಯರಲ್ಲೂ ಅತ್ಯಂತ ಜನಪ್ರಿಯವಾಗಿವೆ. ಶ್ರೀ ದೀಕ್ಷಿತರು ಪಂಚ ತತ್ವಗಳನ್ನೊಳಗೊಂಡ ಪ್ರದೇಶಗಳಲ್ಲಿ ಪರಮೇಶ್ವರ ಕುರಿತಾದ ವಿಶೇಷ ಕೃತಿಗಳನ್ನು ರಚಿಸಿದ್ದಾರೆ. ನವಗ್ರಹ ಕೃತಿಗಳು, ನವಾವರಣ ಕೃತಿಗಳು, ನೀಲೋತ್ಪಲಾಂಬಿಕಾ ಕೃತಿಗಳು ಎಂಬ ಅನೇಕ ಗುಚ್ಛಗಳನ್ನು ರಚಿಸಿದ್ದಾರೆ.

ತಮ್ಮ ಜೀವಿತದ ಕೊನೆಯ ಉಸಿರಿರುವವರೆಗೂ ಪರಮಾತ್ಮನ ಧ್ಯಾನದಲ್ಲಿ ನಿರತರಾಗಿದ್ದವರು. ಬಹಳ ಮೃದು ಹೃದಯಿಗಳೂ, ಕರುಣಾಮಯಿಯೂ ಆಗಿದ್ದರು. ತಮ್ಮ ಶಿಷ್ಯನೊಬ್ಬನ ಹೊಟ್ಟೆ ಶೂಲೆಯನ್ನು ಪರಿಹರಿಸುವ ಸಲುವಾಗಿ, ಅವನಿಗೆ ಗುರು ಮತ್ತು ಶನಿ ಗ್ರಹಗಳನ್ನು ಬಲ ಪಡಿಸುವುದಕ್ಕೋಸ್ಕರವೇ ಅವರು ಗುರು, ಶನಿ ಗ್ರಹಗಳನ್ನು ಕುರಿತು ಕೃತಿ ರಚಿಸಿದರಂತೆ. ಅನ್ಯಕುಲದವನಾದ ತಾನು ನವಗ್ರಹ ಶಾಂತಿ ಮಾಡುವುದಾದರೂ ಹೇಗೆ ಎಂದು ವ್ಯತಿಥನಾಗಿದ್ದ ಆತನಿಗೆ ಸ್ವಯಂ ಈ ಕೃತಿಗಳನ್ನು ಬೋಧಿಸಿದರಂತೆ. ಮಂತ್ರಗಳಿಂದ ಹೇಗೆ ನಾವು ದೇವತೆಗಳನ್ನು ಒಲಿಸಿಕೊಂಡು ಗ್ರಹಗಳ ಶಾಂತಿ ಮಾಡಿಕೊಳ್ಳಬಹುದೋ ಅಂತೆಯೇ ಅದನ್ನು ಸಂಗೀತ ಮುಖೇನ ಕೂಡಾ ಮಾಡಲು ಸಾಧ್ಯವೆಂಬುದನ್ನು ಶಿಷ್ಯನಿಗೆ ತಿಳಿಸಿಕೊಟ್ಟರಂತೆ. ತನ್ಮಯನಾಗಿ, ಭಕ್ತಿಯಿಂದ ಅಭ್ಯಸಿಸಿದ ಶಿಷ್ಯನ ಉದರ ಬೇನೆ ವಾಸಿಯಾಗಿತ್ತು. ಹೀಗೆ ದೀಕ್ಷಿತರು ಮಂತ್ರಾನುಷ್ಠಾನದ ಫಲವನ್ನು ನಾದೋಪಾಸನೆಯಿಂದ ಮಾಡಬಹುದೆಂದು ಜ್ಯೋತಿಷ್ಯ ಶಾಸ್ತ್ರದ ವಿಶೇಷಗಳನ್ನೆಲ್ಲಾ ಒಟ್ಟಾಗಿಸಿ, ನವಗ್ರಹ ಕೃತಿಗಳನ್ನು ರಚಿಸಿದರು. ಈ ಕೃತಿಗಳು ಸಂಗೀತ ಲೋಕದಲ್ಲೇ ಅತ್ಯಂತ ಶ್ರೇಷ್ಠ ಕೃತಿಗಳೆನಿಸಿವೆ.

ಆಶ್ವೀಜ ಬಹುಳ ಚತುರ್ದಶಿ – ನರಕ ಚತುರ್ದಶಿ ದೀಪಾವಳಿ ಪರ್ವ ದಿನವಾದ್ದರಿಂದ ದೀಕ್ಷಿತರು (ಅಕ್ಟೋಬರ್ 21, 1835) ಜಗನ್ಮಾತೆಗೆ ವಿಶೇಷ ಪೂಜೆ ಸಲ್ಲಿಸಿ, ಸಾಯಂಕಾಲ ತಮ್ಮ ಎಲ್ಲಾ ಶಿಷ್ಯರನ್ನೂ ಕರೆದು ತಾವೇ ರಚಿಸಿದ ಪೂರ್ವಿ ಕಲ್ಯಾಣಿ ರಾಗದ "ಮೀನಾಕ್ಷಿ ಮುದಂ ದೇಹಿ" ಕೃತಿಯನ್ನು ವೀಣೆಯಲ್ಲಿ ನುಡಿಸುತ್ತಾ, ಎಲ್ಲರಿಗೂ ಹಾಡಲು ಹೇಳುತ್ತಾರೆ. "ಮೀನಲೋಚನಿ ಪಾಶಮೋಚನಿ" ಎಂಬ ಅನುಪಲ್ಲವಿಯ ಸಾಹಿತ್ಯವನ್ನು ಪದೇ ಪದೇ ಹಾಡಿಸುತ್ತಾ, ವೀಣೆ ಬದಿಗಿಟ್ಟು ತಂಬೂರಿಯ ನಾದ ಕೇಳುತ್ತಾ, ಆ ಜಗನ್ಮಾತೆಯ ಮಡಿಲಿನಲ್ಲಿ ಒರಗಿ ತಾಯಿಯಲ್ಲಿ ಅವರ ಆತ್ಮ ಲೀನವಾಯಿತು. ಸಂಗೀತ ಪ್ರಪಂಚದಲ್ಲಿ ದೀಪಾವಳಿಯನ್ನು "ದೀಕ್ಷಿತರ ದಿನ" ಎಂದೇ ಆಚರಿಸಲಾಗುತ್ತಿದೆ.

## ಎಲ್ಲೋ ಕೇಳಿದ ಕಥೆ

### ಶ್ರದ್ಧೆಯ ಕುರಿತು ಶ್ರೀರಾಮಕೃಷ್ಣ ಪರಮಹಂಸರು ಹೇಳಿದ ದೃಷ್ಟಾಂತ ಕಥೆ?

ಒಮ್ಮೆ ಒಬ್ಬ ಸಮುದ್ರವನ್ನು ದಾಟಬೇಕಿತ್ತು. ಹಡಗು, ದೋಣಿಯಂಥಾ ಯಾವ ಸಾಧನವೂ ಲಭ್ಯವಿರಲಿಲ್ಲ. ಸಮುದ್ರ ದಡದಲ್ಲಿ ನಿಂತು ಅವನು ಯೋಚಿಸುತ್ತ ದುಃಖಿಸುತ್ತಿದ್ದ.

ಅದೇ ವೇಳೆಗೆ ಜಾಂಬವಂತ ಅಲ್ಲಿಗೆ ಬಂದ. "ಯಾಕೆ ದುಃಖದಲ್ಲಿದ್ದೀಯ?" ಎಂದು ಪ್ರಶ್ನಿಸಿದ.

"ನಾನು ಈ ಸಮುದ್ರವನ್ನು ದಾಟಬೇಕಿದೆ. ಯಾವ ನೌಕೆಯೂ ಇಲ್ಲವೆಂದು ಬೇಸರವಾಗಿದೆ" ಅಂದ ಆ ವ್ಯಕ್ತಿ.

ಜಾಂಬವಂತ ಅವನ ಮೇಲೆ ಅನುಕಂಪವಿಟ್ಟು, ಎಲೆಯೊಂದರಲ್ಲಿ ಒಂದು ಮಂತ್ರ ಬರೆದು, ಅದನ್ನು ಮಡಚಿ ಅವನ ಕೈಗೆ ಕೊಟ್ಟ.


"ನೋಡು! ಇದನ್ನು ಭದ್ರವಾಗಿಟ್ಟುಕೋ. ಇದರೊಳಗೆ ಮಂತ್ರವಿದೆ. ಈ ಮಂತ್ರದ ಶಕ್ತಿ ನಿನ್ನನ್ನು ಸಮುದ್ರ ದಾಟಿಸುತ್ತದೆ." ಅಂದ.

ಆ ವ್ಯಕ್ತಿ ಎಲೆಯನ್ನು ಭದ್ರವಾಗಿ ಹಿಡಿದುಕೊಂಡು, ಮಂತ್ರದ ಮೇಲಿನ ಶ್ರದ್ಧೆಯಿಂದ ಸಮುದ್ರದ ಮೇಲೆ ನಡೆಯತೊಡಗಿದ. ಯಾವ ಅಡ್ಡಿಯೂ ಇಲ್ಲದೆ ಸಾಗುತ್ತಿದ್ದ ಅವನಿಗೆ, ಮಾರ್ಗ ಮಧ್ಯದಲ್ಲಿ ಆ ಎಲೆಯೊಳಗೆ ಏನು ಬರೆದಿರಬಹುದು ಎಂಬ ಕುತೂಹಲ ಹುಟ್ಟಿತು. ತೆರೆದು ನೋಡೇಬಿಡೋಣ ಎಂದು ಕೊಂಡ.

ನೋಡಿದರೆ, ಅದರಲ್ಲಿ 'ಶ್ರೀ ರಾಮ' ಎಂದಷ್ಟೇ ಬರೆದಿತ್ತು!

"ಅಯ್ಯೋ, ಇಷ್ಟೆಯೇ ಇದರಲ್ಲಿರುವುದು! ನಾನೇನೋ ಭಾರೀ ರಹಸ್ಯ ಮಂತ್ರ ಬರೆದಿದ್ದಾರೆ ಅಂದುಕೊಂಡಿದ್ದರೆ ಬರೀ ರಾಮನಾಮವೇ!?" ಅಂದುಕೊಂಡ.

ಅವನು ಹಾಗೆ ಅಂದುಕೊಂಡ ಕೂಡಲೇ ಸಮುದ್ರದ ಮೇಲಿನ ನಡಿಗೆಯ ಸಮತೋಲನ ತಪ್ಪಿ ನೀರಿನಲ್ಲಿ ಮುಳುಗಿಹೋದ.




## ಪುಸ್ತಕ ಪರಿಚಯ

### ನಾಲ್ಕನೆಯ ತಲೆಮಾರಿನ ಸಮರ

ಲೇಖಕರು : ಪ್ರೇಮಶೇಖರ  
ಪ್ರಕಾಶಕರು : ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ  
ಬೆಲೆ : 180/-

ಆದಿಕಾಲದಿಂದ ಇಂದಿನವರೆಗೆ ಬದಲಾಗುತ್ತಾ ಬಂದಿರುವ ಕದನದ ಸ್ವರೂಪವನ್ನು ಪರಿಗಣಿಸಿ ಸಮರಗಳು ಐದು ತಲೆಮಾರುಗಳಲ್ಲಿ ವಿಕಸಿಸುತ್ತಾ ಬಂದಿವೆ ಎಂದು ಗುರುತಿಸಬಹುದು. ರಣಾಂಗಣದಲ್ಲಿ ಮುಖಾಮುಖಿಯಾದ ಪರಸ್ಪರ ವಿರೋಧಿ ಸೈನಿಕರು ಒಬ್ಬರ ಮೇಲೊಬ್ಬರು ಸೆಣಸುವುದು ಮೊದಲ ತಲೆಮಾರಿನ ಸಮರ, ನಂತರ ಆಧುನಿಕ ಕಾಲದಲ್ಲಿ ವಿಜ್ಞಾನದ ಸಹಾಯದಿಂದ ಮಾರಕಾಸ್ತ್ರಗಳ ಅವಿಷ್ಕಾರವಾಗತೊಡಗಿದಂತೆ ವಿವಿಧ ಬಗೆಯ ತುಪಾಕಿಗಳು, ಬಂದೂಕುಗಳನ್ನು ಬಳಸತೊಡಗಿದ್ದು ಎರಡನೆಯ ತಲೆಮಾರಿನ ಯುದ್ಧ ಎನಿಸಿಕೊಂಡಿತು. ಮತ್ತೂ ಮುಂದುವರೆದು ಇಪ್ಪತ್ತನೆಯ ಶತಮಾನದಲ್ಲಿ ಯುದ್ಧವಿಮಾನಗಳು, ಕ್ಷಿಪಣಿಗಳು ಹಾಗೂ ಡ್ರೋನ್ಗಳ ಮೂಲಕ ಯುದ್ಧಗಳು ನಡೆಯಲಾರಂಭಿಸಿದಾಗ ಅದು ಮೂರನೆಯ ತಲೆಮಾರಿನ ಯುದ್ಧ ಎನಿಸಿಕೊಂಡಿತು.

ಇವುಗಳಿಗೆ ಹೋಲಿಸಿದರೆ ನಾಲ್ಕನೆಯ ತಲೆಮಾರಿನ ಸಮರ ಸಂಪೂರ್ಣ ಭಿನ್ನವಾದುದು. ಇದರಲ್ಲಿ ಸೈನಿಕರೂ ಇರುವುದಿಲ್ಲ ಮತ್ತು ಬಹುತೇಕ ಸಂದರ್ಭಗಳಲ್ಲಿ ಯಾವುದೇ ಆಯುಧ ಅಸ್ತ್ರವೂ ಇರುವುದಿಲ್ಲ. ಹಾಗಿದ್ದರೆ ಈ ಸಮರ ನಡೆಯುವುದಾದರೂ ಹೇಗೆ? ಎಂದು ಚಿಂತನೆಗೆ ಹಚ್ಚುತ್ತಾರೆ ಪ್ರೊ.ಪ್ರೇಮಶೇಖರ ಅವರು. ಹೊಸ ಯುದ್ಧ ರೀತಿಗಳು, ಅಪಾಯ, ಪರಿಣಾಮಗಳ ಕುರಿತು ಸವಿವರವಾಗಿ ಬರೆಯುತ್ತಾರೆ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ

### ಸಕ್ಷಮ ಸಂಸ್ಥೆಯಿಂದ ನೇತ್ರದಾನ ಜಾಗೃತಿ ಶಿಬಿರ ಮತ್ತು ಸಾಧಕ ದಿವ್ಯಾಂಗ ಶಿಕ್ಷಕರಿಗೆ ಸನ್ಮಾನ

ಸಕ್ಷಮ ಬೆಂಗಳೂರು ಘಟಕವು ಆರ್.ಎನ್.ಎಸ್. ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್. ಘಟಕದ ಸಹಯೋಗದೊಂದಿಗೆ ಇಂದು ಬೆಂಗಳೂರಿನ ಚನ್ನಸಂದ್ರದ ಆರ್.ಎನ್.ಎಸ್. ಸಭಾಂಗಣದಲ್ಲಿ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಪ್ರಯುಕ್ತ ಬೃಹತ್ ನೇತ್ರದಾನ ಜಾಗೃತಿ ಶಿಬಿರ ಹಾಗೂ ಸಾಧಕ ದಿವ್ಯಾಂಗ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮ ನಡೆಸಲಾಯಿತು. ಈ ಸಂದರ್ಭದಲ್ಲಿ ಬೆಂಗಳೂರಿನ ನೇತ್ರಧಾಮ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ನೇತ್ರತಜ್ಞೆಯಾದ ಡಾ. ಸಂಹಿತ ಹೆಚ್.ಆರ್. ರವರು ನೇತ್ರದಾನದ ಮಹತ್ವ, ನೇತ್ರದಾನದ ಬಗ್ಗೆ ಜನರಲ್ಲಿ ಇರುವ ತಪ್ಪು ಕಲ್ಪನೆಗಳು ಹಾಗೂ ನೇತ್ರದಾನ ಮಾಡುವ ವಿಧಾನಗಳ ಬಗ್ಗೆ ಮಾಹಿತಿ ನೀಡಿ ಒಬ್ಬ ವ್ಯಕ್ತಿ ನೇತ್ರದಾನ ಮಾಡುವುದರಿಂದ 4 ಜನರಿಗೆ ದೃಷ್ಟಿ ಸಿಗುವ ಆಧುನಿಕ ತಂತ್ರಜ್ಞಾನಗಳ ಬಗ್ಗೆ ವಿವರಿಸಿದರು.



ಈ ಸಂದರ್ಭದಲ್ಲಿ ಶಿಕ್ಷಕರ ದಿನಾಚರಣೆಯ ಪ್ರಯುಕ್ತ ಇಬ್ಬರು ಸಾಧಕ ದಿವ್ಯಾಂಗ ಶಿಕ್ಷಕ ಶಿಕ್ಷಕಿಯರನ್ನು ಗುರುತಿಸಿ ಗೌರವಿಸಲಾಯಿತು. ಮೈಸೂರಿನ ಖ್ಯಾತ ದೃಷ್ಟಿಬಾಧಿತ ಗಾಯಕಿ ಹಾಗೂ ಸಂಗೀತ ಗುರುಗಳಾದ ವಿದೂಷಿ ಮಾಲಿನಿಯವರನ್ನು ಸಂಗೀತ ಕ್ಷೇತ್ರದ ಅದ್ವಿತೀಯ ಸಾಧನೆಗಳಿಗಾಗಿ ಹಾಗೂ ಬೆಂಗಳೂರಿನ ವಿಜಯನಗರದ ಶ್ರೀ ಲಕ್ಷ್ಮೀಪತಯ್ಯನವರನ್ನು ಪೋಲಿಯೋ ಬಾಧಿತರಾಗಿಯೂ ತಮ್ಮ ಚಲನವಲನ ಸಮಸ್ಯೆಗಳೊಂದಿಗೆ ಎನ್.ಟಿ.ಟಿ.ಎಫ್ ಸಂಸ್ಥೆಯಲ್ಲಿ ಶಿಕ್ಷಕರಾಗಿ ಅಲ್ಲಿನ ದಿವ್ಯಾಂಗ ಮಕ್ಕಳಿಗೆ ಉಚಿತ ಊಟ ವಸತಿನೀಡಿ ಕಲಿಸುತ್ತ ಹಾಸ್ಟೆಲ್ ನಡೆಸುವ ಸೇವಾಕಾರ್ಯಗಳಿಗಾಗಿ ಅವರಿಬ್ಬರನ್ನು ವೇದಿಕೆಯಲ್ಲಿ ಸನ್ಮಾನಿಸಲಾಯಿತು.

ಸಭಾಕಾರ್ಯಕ್ರಮದ ನಂತರ ಸುಮಾರು 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸೈಟಾಥಾನ್ – ಕಣ್ಣು ಕಟ್ಟಿ ನಡಿಗೆ ಮೂಲಕ ರಸ್ತೆಗಳಲ್ಲಿ ನೇತ್ರದಾನ ಜಾಗೃತಿಯ ಘೋಷಣೆ ಕೂಗುತ್ತ ನೇತ್ರದಾನದ ಅರಿವನ್ನು ಸಾರ್ವಜನಿಕರಲ್ಲಿ ಮೂಡಿಸುವಲ್ಲಿ ಯಶಸ್ವಿಯಾದರು.

### ಸೆಪ್ಟೆಂಬರ್ 22–24ರವರೆಗೆ ಗವಾಹಟಿಯಲ್ಲಿ ಲೋಕಮಂಥನ–2022

ಪ್ರಜ್ಞಾ ಪ್ರವಾಹದ ರಾಷ್ಟ್ರೀಯ ಸಂಯೋಜಕರಾದ ಶ್ರೀ ಜೆ.ನಂದಕುಮಾರ್ ಪತ್ರಿಕಾಗೋಷ್ಠಿ ನಡೆಸಿ ಲೋಕಮಂಥನ 2022ರ ಕುರಿತು ಮಾಹಿತಿ ನೀಡಿದರು. ಪ್ರಜ್ಞಾ ಪ್ರವಾಹದ ಕ್ಷೇತ್ರೀಯ ಸಂಯೋಜಕರಾದ ಶ್ರೀ ರಘುನಂದನ ಅವರು ಉಪಸ್ಥಿತರಿದ್ದರು.




ಲೋಕ ಮಂಥನ 3ನೇಯ ಆವೃತ್ತಿಯು ರಾಷ್ಟ್ರ ಮೊದಲು ಎಂಬ ಚಿಂತನೆಯುಳ್ಳ ಚಿಂತಕರ, ಕಾರ್ಯಪ್ರವೃತ್ತರ ಸಮಾವೇಶವನ್ನು ಪ್ರಜ್ಞಾ ಪ್ರವಾಹವು ಇನ್ನಿತರ ಸಮಾನ ಮನಸ್ಕ ವೈಚಾರಿಕ ಸಂಘಟನೆಗಳಾದ ಸಂಸ್ಕಾರ ಭಾರತಿ, ಅಖಿಲ ಭಾರತೀಯ ಸಾಹಿತ್ಯ ಪರಿಷತ್, ವಿಜ್ಞಾನ ಭಾರತಿ, ಇತಿಹಾಸ ಸಂಕಲನ ಸಮಿತಿ, ವನವಾಸಿ ಕಲ್ಯಾಣ ಆಶ್ರಮಗಳ ಸಹಯೋಗದೊಂದಿಗೆ ಗವಾಹಟಿಯಲ್ಲಿ ಸೆಪ್ಟೆಂಬರ್ 22–24, 2022ರಂದು ಆಯೋಜಿಸುತ್ತಿದೆ. ಇಂಟಲೆಕ್ಚುವಲ್ ಫೋರಮ್ ಆಫ್ ನಾರ್ತ್ ಈಸ್ಟ್ (IFNE) ಇದರ ಸ್ಥಳೀಯ ಆಯೋಜಕರಾಗಿದ್ದು ಅಸ್ಸಾಮಿನ ಪ್ರವಾಸೋದ್ಯಮ ಇಲಾಖೆಯು ಇದಕ್ಕೆ ಸಹಕಾರ ನೀಡುತ್ತಿದೆ.

ಈ ವರ್ಷದ ಒಟ್ಟಾರೆ ಸಮಾವೇಶದ ಹಿನ್ನೆಲೆಯಲ್ಲಿ "ಲೋಕಪರಂಪರೆ"ಯ ಕುರಿತಾಗಿ ಚರ್ಚೆ ನಡೆಯಲಿದ್ದು ಸಮಾವೇಶದಲ್ಲಿ ಹೇಗೆ ಲೋಕಪರಂಪರೆಯು ನಮ್ಮ ಜಾನಪದ ಸಂಸ್ಕೃತಿಯನ್ನು ಮತ್ತು ಸಾಂಸ್ಕೃತಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಾ ರಾಷ್ಟ್ರೀಯತೆಯನ್ನು ಮತ್ತು ಸ್ವತ್ವವನ್ನು ಬೆಳೆಸುತ್ತಾ ಬಂದಿದೆ ಎಂಬುದರ ಕುರಿತಾಗಿಯೂ ವಿಸ್ತಾರವಾಗಿ ಚರ್ಚೆ ನಡೆಯಲಿದೆ.

ಉಪರಾಷ್ಟ್ರಪತಿ ಶ್ರೀ ಜಗದೀಪ್ ಧನಕರ್ ಅವರು ಕಾರ್ಯಕ್ರಮದ ಉದ್ಘಾಟನೆಯಲ್ಲಿ ಭಾಗವಹಿಸಲಿದ್ದು ಅಸ್ಸಾಮಿನ ಮುಖ್ಯಮಂತ್ರಿ ಶ್ರೀ ಹಿಮವಂತ್ ಬಿಸ್ವಾಸ್ ಶರ್ಮ ಅವರು ಉಪಸ್ಥಿತರಿರಲಿದ್ದಾರೆ. ಇದರ ಸಮಾರೋಪ ಸಮಾರಂಭದಲ್ಲಿ ಕೇರಳದ ಘನತೆವೆತ್ತ ರಾಜ್ಯಪಾಲರಾದ ಶ್ರೀ ಆರಿಫ್ ಮಹಮದ್ ಖಾನ್ ಹಾಗು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹರಾದ ಶ್ರೀ ದತ್ತಾತ್ರೇಯ ಹೊಸಬಾಳೆಯವರು ಭಾಗವಹಿಸಿ ಮಾತನಾಡಲಿದ್ದಾರೆ. ವಿಚಾರವಂತರು, ಪ್ರಮುಖ ಕಲಾವಿದರು, ಅಕಾಡೆಮಿಷಿಯನ್‌ಗಳು ವಿವಿಧ ಸಭೆಗಳಲ್ಲಿ ಭಾಗವಹಿಸಿ ಮಾತನಾಡಲಿದ್ದಾರೆ.

ಲೋಕಮಂಥನವು ದೇಶದ ವಿವಿಧ ಭಾಗದಿಂದ ಆಗಮಿಸಿದ ಕಲಾವಿದರು, ವಿಚಾರವಂತರು ಮತ್ತು ಅಕಾಡೆಮಿಷಿಯನ್‌ಗಳನ್ನು ಒಟ್ಟುಗೂಡಿಸುವ ಮತ್ತು ಸಮಾಜದಲ್ಲಿರುವ ಸವಾಲುಗಳಿಗೆ ತಕ್ಕದಾದ ಆಖ್ಯಾನಗಳನ್ನು ರೂಪಿಸುವುದು ಮತ್ತು ಅಗತ್ಯವಾದ ಅಂಶಗಳನ್ನು ಬದಲಾಯಿಸುತ್ತಾ ರಾಷ್ಟ್ರವನ್ನು ಮುನ್ನಡೆಸುವ ಸಮರ್ಥ ನಾಗರಿಕ ಸಮಾಜವನ್ನು ರೂಪಿಸುವ ಬಹು ಅಪ್ಯಾಯಮಾನವಾದ ವೇದಿಕೆಯಾಗಿದೆ. ಈ ಮೂರು ದಿನಗಳ ಕಾರ್ಯಕ್ರಮ ಮಾತ್ರವಲ್ಲದೆ ಭಾರತದ ಶ್ರೀಮಂತ ವೈವಿಧ್ಯತೆಯನ್ನು ತೋರುವ ಅನೇಕ ಸಂವಾದ, ಸೆಮಿನಾರ್, ಸಾಂಸ್ಕೃತಿಕ ಕಾರ್ಯಕ್ರಮಗಳು ಜೊತೆಯಾಗಿ ಆಯೋಜನೆಗೊಂಡಿದೆ.

ಸಮಾಜದಲ್ಲಿ ಒಡಕನ್ನು ಹುಟ್ಟುಹಾಕುತ್ತಿರುವ ಮತ್ತು ಭಾರತದ ಐಕ್ಯತೆಯನ್ನು ಛಿದ್ರಗೊಳಿಸುವ ಶಕ್ತಿಗಳು ಕೆಲಸ ಮಾಡುತ್ತಿರುವ ಈ ಸಂದರ್ಭದಲ್ಲಿ ಲೋಕಮಂಥನವು ಆಯೋಜನೆಗೊಳ್ಳುತ್ತಿದ್ದು, ಈ ರೀತಿಯ ಶಕ್ತಿಗಳಿಗೆ, ಭಾರತವನ್ನು ರಾಜ್ಯಗಳ ಒಕ್ಕೂಟ ಮಾತ್ರವೆಂಬಂತೆ ಬಿಂಬಿಸುತ್ತಿರುವವರಿಗೆ ಸಾಂಸ್ಕೃತಿಕ ಮತ್ತು ನಾಗರೀಕವಾದ ಉತ್ತರವೆಂಬಂತೆ ಲೋಕಮಂಥನವು ಆಯೋಜನೆಗೊಳ್ಳುತ್ತಿದೆ.

ಲೋಕಮಂಥನದ ಕುರಿತು ಮಾತನಾಡುತ್ತಾ ಪ್ರಜ್ಞಾ ಪ್ರವಾಹದ ರಾಷ್ಟ್ರೀಯ ಸಂಯೋಜಕರಾದ ಶ್ರೀ ಜೆ. ನಂದಕುಮಾರ್ ಅವರು ಮಾತನಾಡುತ್ತಾ " ಎಲ್ಲ ವೈವಿಧ್ಯಗಳು, ತದ್ವಿರುದ್ಧ ಪರಂಪರೆ ಆಚರಣೆಗಳ ಆಚೆಗೆ ನಮ್ಮನ್ನೆಲ್ಲ ಸಾಂಸ್ಕೃತಿಕವಾಗಿ ಒಂದು ತಂತು ಬೆಸೆದುಕೊಂಡಿದ್ದು ಅದು ಭಾರತವನ್ನು ಒಂದು ರಾಷ್ಟ್ರವಾಗಿ, ಒಂದು ನಾಗರೀಕತೆಯಾಗಿ 7,000 ವರ್ಷಗಳಿಂದ ಸತತವಾಗಿ ಬೆಳೆಸಿಕೊಂಡು ಬಂದಿದೆ. ಈ ಏಕತೆ ನಮಗೆ ಹೊರಗಿನಿಂದ ಹೇರಿರುವಂಥದ್ದಲ್ಲ ಅಥವಾ ಹೊರಗಿನ ಯಾವುದೋ ನಂಬಿಕೆಗೆ,ದಬ್ಬಾಳಿಕೆಗಳಿಗೆ ಅಥವಾ ರಾಜಕೀಯ ಕಾರಣಗಳಿಗೆ ಒಳಗಾಗಿ ಹುಟ್ಟಿದ್ದಲ್ಲ.ನಮ್ಮೊಳಗೆ ನಮ್ಮನ್ನು ಬೆಸೆಯುತ್ತಿರುವ, ವೈವಿಧ್ಯವನ್ನು ಪ್ರೋತ್ಸಾಹಿಸುತ್ತಾ ಮತ್ತು ಒಂದುಗೂಡಿಸುವ, ಪರಂಪರೆಯನ್ನು ಒಪ್ಪಿಕೊಂಡು ಅದನ್ನು ಬೆಳೆಸುತ್ತಿರುವ ಜಾನಪದ ಸಂಸ್ಕೃತಿ ಮತ್ತು ತತ್ವಜ್ಞಾನದಂತಹ ಶಕ್ತಿಗಳ, ರಾಷ್ಟ್ರವನ್ನು ಸ್ವತ್ವದೆಡೆಗೆ ಬಲಪಡಿಸುವ ಪ್ರಕ್ರಿಯೆಗೆ ನೀರೆರೆಯುವ ಪ್ರಯತ್ನವೇ ಲೋಕಮಂಥನ" ಎಂದರು.

ಲೋಕಮಂಥನದ ಮೊದಲ ಆವೃತ್ತಿಯು 2016ರಲ್ಲಿ 'ದೇಶ–ಕಾಲ–ಸ್ಥಿತಿ' ಎಂಬ ವಿಚಾರದ ಮೇಲೆ ನಡೆದಿದ್ದು ,ನಂತರ 2018ರಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಭಾರತ ಬೋಧ: ಜನ ಗಣ ಮನ' ಎಂಬ ಆಶಯದೊಂದಿಗೆ ನಡೆದಿತ್ತು.

### ಪುರಾತತ್ತ್ವ ಕ್ಷೇತ್ರಕ್ಕೆ ಬ್ರಜ ಬಸಿಲಾಲ್ ಅವರ ಕೊಡುಗೆ ಅಪಾರ? ದತ್ತಾತ್ರೇಯ ಹೊಸಬಾಳೆ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹರಾದ ಶ್ರೀ ದತ್ತಾತ್ರೇಯ ಹೊಸಬಾಳೆಯವರು ಹಿರಿಯ ಪುರಾತತ್ವ ತಜ್ಞರು ಮತ್ತು ಪದ್ಮವಿಭೂಷಣ ಪುರಸ್ಕೃತ ಶ್ರೀ ಬ್ರಜ ಬಸೀಲಾಲ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

"ಖ್ಯಾತ ಪುರಾತತ್ವಶಾಸ್ತ್ರಜ್ಞ ಶ್ರೀ ಬ್ರಜ ಬಸಿಲಾಲ್ ಅವರ ನಿಧನ ತೀವ್ರ ನೋವು ತಂದಿದೆ. ಅವರು ಪ್ರತಿಭೆಯಿಂದ ಶ್ರೀಮಂತರಾಗಿದ್ದರು



ಮತ್ತು ಭಾರತದ ಉನ್ನತವಾದ ಐತಿಹಾಸಿಕ ಪರಂಪರೆಯನ್ನು ಸ್ಥಾಪಿಸುವಲ್ಲಿ ತಮ್ಮ ಸಂಶೋಧನೆಯ ಮೂಲಕ ಗಣನೀಯ ಕೊಡುಗೆ ನೀಡಿದ್ದಾರೆ. ಅಯೋಧ್ಯೆಯ ಶ್ರೀರಾಮ ಜನ್ಮಭೂಮಿಯ ಕೆಳಭಾಗದ ದೇವಾಲಯದ ಪರಿಶೀಲನೆಯಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಈ ಕ್ಷೇತ್ರದಲ್ಲಿ ಅವರ ಕೊಡುಗೆಯನ್ನು ಸ್ಮರಣೀಯ. ಅವರಿಗೆ, ಅವರ ಕಾರ್ಯಕ್ಕೆ ನಮನ ಸಲ್ಲಿಸುತ್ತೇವೆ ಮತ್ತು ದೇವರು ಅವರ ಆತ್ಮಕ್ಕೆ ಶಾಂತಿ ಮತ್ತು ಮೋಕ್ಷವನ್ನು ನೀಡಲಿ ಎಂಬ ನಮ್ಮ ಪ್ರಾರ್ಥನೆ" ಎಂದು ಸಂತಾಪ ಸಂದೇಶ ತಿಳಿಸಿದ್ದಾರೆ.

### "ಕಾಂಗ್ರೆಸ್ ಜನರನ್ನು ದ್ವೇಷದ ಮೂಲಕ ಸಂಪರ್ಕಿಸುವ ಪ್ರಯತ್ನ ಮಾಡುತ್ತಿದೆ"? ಸಹಸರಕಾರ್ಯವಾಹ ಮನಮೋಹನ್ ವೈದ್ಯ ಹೇಳಿಕೆ

ಅವರು ಛತ್ತೀಸ್‌ಗಢದ ರಾಯ್ಪುರದಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಸಮನ್ವಯ ಬೈಠಕ್ 2022ನ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಾ ,"ಜನರನ್ನು ದ್ವೇಷದ ಮೂಲಕ ಸಂಪರ್ಕಿಸಲು ಪ್ರಯತ್ನ ಮಾಡುತ್ತಿದ್ದಾರೆ ಮತ್ತು ಅದಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಮಧ್ಯೆ ಎಳೆದು ತರುವ ಪ್ರಯತ್ನವನ್ನು ಬಹಳ ಹಿಂದಿನಿಂದಲೂ ಮಾಡಿಕೊಂಡು ಬರುತ್ತಿದ್ದಾರೆ. ಅವರ ತಂದೆ ಮತ್ತು ತಾತಂದಿರು ಸಂಘವನ್ನು ತಡೆಯಲು ಪ್ರಯತ್ನ ಮಾಡಿದರು, ಆದರೆ ಸಂಘ ನಿಲ್ಲಲಿಲ್ಲ, ಅದು ಬೆಳೆಯುತ್ತಲೇ ಬಂದಿತು, ಜನರೂ ಸಂಘಕ್ಕೆ ತಮ್ಮ ಸಂಪೂರ್ಣ ಸಹಕಾರವನ್ನು ನೀಡಿದರು" ಎಂದರು.

ಹಿಂದಿನ ದಿನ ಕಾಂಗ್ರೆಸ್ ಅದರ ಟ್ವಿಟರ್ ಹ್ಯಾಂಡಲ್ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿಂದಿನ



ಸಮವಸ್ತ್ರ ಖಾಕಿ ಚೆಡ್ಡಿಗೆ ಬೆಂಕಿ ಹೊತ್ತಿಕೊಂಡಿರುವ ಫೋಟೋ ಹಂಚಿಕೊಂಡಿದೆ. ಈ ಫೋಟೋದ ಜೊತೆಗೆ ಕಾಂಗ್ರೆಸ್ ತಾನು ನಡೆಸುತ್ತಿರುವ ಭಾರತ್ ಜೋಡೋ ಯಾತ್ರೆಯ ಲೋಗೋದ ಜೊತೆಗೆ ಮೇಲೆ "ದೇಶವನ್ನು ದ್ವೇಷ ಮುಕ್ತವನ್ನಾಗಿಸುವ ಮತ್ತು ಬಿಜೆಪಿ ಆರ್‌ಎಸ್‌ಎಸ್ ದೇಶದಲ್ಲಿ ಮಾಡಿರುವ ಎಲ್ಲ ಹಾನಿಯನ್ನು ಹಂತ ಹಂತವಾಗಿ ಸರಿಮಾಡಿ ನಾವು ನಮ್ಮ ಗುರಿಯನ್ನು ಸಾಧಿಸುತ್ತೇವೆ" ಎಂದು ಬರೆದುಕೊಂಡಿದೆ.

### "ಮಾತಾ ಅಮೃತಾನಂದಮಯಿ ದೇವಿ ಸದಾ ಪ್ರೇರಣಾದಾಯಿ" – ಡಾ. ಮೋಹನ್ ಭಾಗವತ್

"ಮಾತಾ ಅಮೃತಾನಂದಮಯಿ ದೇವಿ ಅವರು ಸದಾ ಪ್ರೇರಣದಾಯಿ" ಎಂದು ಆರ್‌ಎಸ್‌ಎಸ್ ಸರಸಂಘಚಾಲಕರಾದ ಡಾ. ಮೋಹನ್ ಭಾಗವತ್ ಅವರು ಹೇಳಿದರು. ಕೊಲ್ಲಂನ ಅಮೃತಪುರಿ ಆಶ್ರಮದಲ್ಲಿರುವ ಅಮೃತಾನಂದಮಯಿ ದೇವಿ ಅವರನ್ನು ಭೇಟಿ ಮಾಡಿ ಅವರು ಮಾತನಾಡಿದರು. "ನಮ್ಮ ಶ್ರೇಷ್ಠ ಸಂಪ್ರದಾಯ ಮತ್ತು ಸಂಸ್ಕೃತಿಯ ಬೆಳಕಿನಲ್ಲಿ ನಾವು ಯಾವಾಗಲೂ ಸರಳವಾದ ಮಾತುಗಳಲ್ಲಿ ಉತ್ತಮ ಸಲಹೆಗಳನ್ನು ಪಡೆಯುತ್ತೇವೆ. ಹೇಗೆ ವರ್ತಿಸಬೇಕು ಮತ್ತು ನಮ್ಮ ನಡೆ ಹೇಗಿರಬೇಕು ಎಂದು ಅಮ್ಮ ಯಾವಾಗಲೂ ಸಲಹೆ ನೀಡುತ್ತಾರೆ. ಇದೆಲ್ಲವೂ ಕೆಲಸಗಳಿಗೆ ಹೊಸ ಪ್ರೇರಣೆಯನ್ನು ನೀಡುತ್ತದೆ. ಹಾಗಾಗಿ ಇಲ್ಲಿಗೆ ಸತತವಾಗಿ ಬರುತ್ತಿದ್ದೇನೆ" ಎಂದರು.




ಮೋಹನ್ ಭಾಗವತ್ ಅವರು ಗುರುವಾರ ಮಧ್ಯಾಹ್ನದ ಸುಮಾರಿಗೆ ಅಮೃತಪುರಿಯಲ್ಲಿರುವ ಮಾತಾ ಅಮೃತಾನಂದಮಯಿ ಮಠವನ್ನು ತಲುಪಿದರು. ಮಠದ ಹಿರಿಯ ಶ್ರೀಗಳ ನೇತೃತ್ವದಲ್ಲಿ ಬರಮಾಡಿಕೊಳ್ಳಲಾಯಿತು. ಅಮ್ಮ ಅಮೃತಾನಂದಮಯಿ ದೇವಿಯ ದರ್ಶನ ಪಡೆದು, ಆಶೀರ್ವಾದ ಪಡೆದ ಡಾ.ಮೋಹನ್ ಭಾಗವತ್ ಅವರು ಎರಡು ಗಂಟೆಗಳ ಕಾಲ ಸಭೆ ನಡೆಸಿ 6 ಗಂಟೆಗೆ ವಾಪಸಾದರು.

ಆರ್ ಎಸ್ ಎಸ್ ದಕ್ಷಿಣ ಕ್ಷೇತ್ರೀಯ ಪ್ರಚಾರಕ ಎ.ಸೆಂಥಿಲ್ ಕುಮಾರ್, ಪ್ರಾಂತ ಕಾರ್ಯವಾಹ ಪಿ.ಎನ್. ಈಶ್ವರನ್, ಕ್ಷೇತ್ರೀಯ ಸೇವಾ ಪ್ರಮುಖ್ ಕೆ.ಪದ್ಮಕುಮಾರ್, ಪ್ರಾಂತ ಪ್ರಚಾರಕ ಎಸ್.ಸುದರ್ಶನ್, ಕ್ಷೇತ್ರ ವಿಶೇಷ ಸಂಪರ್ಕ ಪ್ರಮುಖ್ ಎ.ಜಯಕುಮಾರ್ ಅವರು ಸಹ ಉಪಸ್ಥಿತರಿದ್ದರು. ಸರಸಂಘಚಾಲಕರು ಅವರು ನಾಲ್ಕು ದಿನಗಳ ಭೇಟಿಗಾಗಿ ಕೇರಳಕ್ಕೆ ಆಗಮಿಸಿದ್ದರು.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th SEPTEMBER 2022

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-10-2022



## ಶಿವಮೊಗ್ಗದಲ್ಲಿ ಇಬ್ಬರು ಶಂಕಿತ ಐಸಿಸ್ ಉಗ್ರರ ಬಂಧನ



ಶಿವಮೊಗ್ಗದಲ್ಲಿ ಇಂದು ಇಬ್ಬರು ಶಂಕಿತ ಉಗ್ರರನ್ನು ಪೊಲೀಸರು ಬಂಧನಕ್ಕೆ ಒಳಪಡಿಸಿದ್ದಾರೆ. ಇವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಏಳು ದಿನಗಳ ಪೊಲೀಸ್ ಕಸ್ಟಡಿಗೆ ನೀಡಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಗೃಹ ಸಚಿವ ಅರಗ ಜ್ಞಾನೇಂದ್ರ ಅವರು, "ಇಸಿಸ್ ಉಗ್ರ ಸಂಘಟನೆಯ ಜೊತೆ ಸಂಪರ್ಕ ಹೊಂದಿದ ಮೂವರನ್ನು ಪತ್ತೆ ಮಾಡಲಾಗಿದೆ. ಅವರಲ್ಲಿ ಮಾಝ್ ಮತ್ತು ಸೈಯದ್ ಯಾಸಿನ್ ಎಂಬ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಒಬ್ಬ ತಪ್ಪಿಸಿಕೊಂಡಿದ್ದಾನೆ. ಶೀಘ್ರದಲ್ಲೇ ಆತನ ಬಂಧನ ಕೂಡ ನಡೆಯಲಿದೆ"ಎಂದಿದ್ದಾರೆ

ಬಂಧಿತರಾದ ಮಾಝ್ ಮತ್ತು ಶಾರಿಕ್ ಮೇಲೆ ಮಂಗಳೂರಿನಲ್ಲಿ ಗೋಡೆ ಬರಹದ ಕೇಸ್ ಇತ್ತು. ಜಾಮೀನು ಪಡೆದು ಹೊರಗಡೆ ಬಂದಿದ್ದರು. ಈಗ ಅವರಿಗೆ ನಿಷೇಧಿತ ಅಗ್ರ ಸಂಘಟನೆಯ ಜೊತೆ ಸಂಪರ್ಕ ಇತ್ತು ಎಂಬ ಮಾಹಿತಿ ದೊರೆಯುತ್ತಿದೆ ಎಂದಿದ್ದಾರೆ.

ವರದಿಗಳ ಪ್ರಕಾರ ಮಂಗಳೂರಿನಲ್ಲಿ, ಶಾರಿಕ್ ಮತ್ತು ಮಾಝ್ ಜೊತೆ ಸಂಪರ್ಕ ಹೊಂದಿದ್ದ ಮತ್ತೊಬ್ಬ ಶಂಕಿತನನ್ನು ಬಂಧನಕ್ಕೆ ಒಳಪಡಿಸಲಾಗಿದೆ.

## ಪ್ರೋಟಿನ್ ಪೌಡರ್ ಮಾರಾಟದ ಬಗ್ಗೆ ಸಮಗ್ರ ತನಿಖೆಗೆ ಬೇಡಿಕೆ

ದೇಹ ಬೆಳೆಸುವ ಸಲುವಾಗಿ ಬಳಸಲಾಗುವ ಪ್ರೋಟಿನ್ ಪೌಡರ್ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆ ನಡೆದಿದೆ. ಪ್ರೋಟಿನ್ ಪೌಡರ್ ಮಾರಾಟದ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಆಗ್ರಹಗಳು ಕೇಳಿ ಬಂದಿವೆ.




ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಕಾನೂನು ಸಚಿವ ಜೆಸಿ ಮಾಧುಸ್ವಾಮಿ ಅವರು, ದೇಹದ ತೂಕಕ್ಕಾಗಿ ಜಿಮ್ ಹಾಗೂ ಇತರ ಕಡೆಗಳಲ್ಲಿ ಪ್ರೋಟೀನ್ ಪೌಡರ್ ಬಳಕೆಯ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದಿದ್ದಾರೆ.

ವಿಧಾನಸಭೆಯಲ್ಲಿ ಶೂನ್ಯವೇಳೆಯಲ್ಲಿ ಬಿಜೆಪಿ ಶಾಸಕ ಸತೀಶ್ ರೆಡ್ಡಿ ಅವರು ಅಕ್ರಮ ಪ್ರೋಟೀನ್ ಪೌಡರ್ ಬಳಸಲಾಗುತ್ತಿರುವ ಬಗ್ಗೆ ವಿಷಯ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಉತ್ತರಿಸಿದ ಸಚಿವರು, ಪ್ರೋಟೀನ್ ಪೌಡರ್ ಮಾರಾಟದ ಬಗ್ಗೆ ಸಮಗ್ರ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಇದೇ ವೇಳೆ, ಆರೋಗ್ಯ ಸಚಿವ ಕೆ ಸುಧಾಕರ್ ಮಾತನಾಡಿ, ಆಹಾರ ಸುರಕ್ಷತೆ ವಿಭಾಗದಿಂದ ವಿಶೇಷ ಅಭಿಯಾನ ನಡೆಸಿ ಅನಧಿಕೃತವಾಗಿ ಪ್ರೋಟೀನ್ ಪೌಡರ್ ಮಾರಾಟ ಮಾಡುತ್ತಿದ್ದರೆ ಕ್ರಮ ಕೈಗೊಳ್ಳಲಾಗುವುದು. ಕೆಲವು ಪ್ರೋಟೀನ್ ಪೌಡರ್‌ಗಳಲ್ಲೂ ಒಳ್ಳೆಯ ಅಂಶ ಇದೆ ಎಂದರು. ಈ ಹಂತದಲ್ಲಿ ಮಧ್ಯಪ್ರವೇಶಿಸಿದ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ಇದರ ನೆಟ್‌ವರ್ಕ್ ದೇಶದಲ್ಲಿ ಬಹಳ ದೊಡ್ಡದಿದೆ. ಪ್ರೋಟೀನ್ ಪೌಡರ್ ಬಗ್ಗೆ ಆಗುವ ಪರಿಣಾಮದ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಸಿ ನಿಗ್ರಹ ಮಾಡಬೇಕು ಎಂದು ಸೂಚಿಸಿದರು.

1ನೇ ಪುಟದಿಂದ...

## ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣಾ ಕಾಯ್ದೆ...

### ಕಾನೂನು ಬಾಹಿರ ಮತಾಂತರಕ್ಕೆ ಶಿಕ್ಷೆ ಏನು?

ಕಲಂ 5 ಇದರ ಬಗ್ಗೆ ಒಂದಷ್ಟು ಬೆಳಕನ್ನು ಚೆಲ್ಲುತ್ತದೆ. ಕಲಮ್ 3ರ ಪ್ರಕರಣದ ಉಪಬಂಧಗಳ ಉಲ್ಲಂಘನೆಯಾದರೆ ಅವರಿಗೆ ಮೂರು ವರ್ಷಗಳ ಅವಧಿಯ ಅಥವಾ ಐದು ವರ್ಷಗಳವರೆಗೆ ವಿಸ್ತರಿಸಬಹುದಾದಂತಹ ಅವಧಿಯ ಕಾರವಾಸ ಹಾಗೂ ಗರಿಷ್ಠ 5 ಲಕ್ಷದವರೆಗೆ ಜುಲ್ಮಾನೆಯನ್ನು ವಿಧಿಸುತ್ತದೆ. ಈ ಕಲಂನ ಮತ್ತಷ್ಟು ವಿಸ್ತೃತ ಮಾಹಿತಿಗೆ ನಾವು ಅಧಿನಿಯಮವನ್ನು ಓದಬಹುದು. ಇಂತಹ ಉಲ್ಲಂಘಿತ ಮತಾಂತರದ ಅದು ಕ್ರಿಮಿನಲ್ ಪ್ರಕ್ರಿಯ ಸಂಹಿತೆಗೆ ಒಳಪಟ್ಟಿರುವುದಲ್ಲದೆ ಜಾಮೀನು ರಹಿತವಾಗಿರುತ್ತದೆ ಎಂಬುದನ್ನು ಕಲಂ 7 ತಿಳಿಸುತ್ತದೆ.

### ಹಾಗಿದ್ದರೆ ಯಾವುದು ಒಪ್ಪಿತ ಮತಾಂತರ?

ಪ್ರಶ್ನೆಗೆ ಉತ್ತರವನ್ನು ಕಲಂ 9 ಸೂಚಿಸುತ್ತದೆ. ಅದರಂತೆ ಮತಾಂತರಗೊಳ್ಳುತ್ತಿರುವ ವ್ಯಕ್ತಿ ಮತಾಂತರದ ದಿನಾಂಕದಿಂದ 30 ದಿನದ ಒಳಗೆ ನಮೂನೆ ಮೂರರಲ್ಲಿ ಘೋಷಣೆಯೊಂದನ್ನು ತಾನು ವಾಸವಾಗಿರುವ ಜಿಲ್ಲೆಯ ಜಿಲ್ಲಾ ದಂಡಾಧಿಕಾರಿಗಳಿಗೆ ಘೋಷಣೆಯನ್ನು ಕಳುಹಿಸಿರಬೇಕು. ಅದನ್ನು ಜಿಲ್ಲಾ ದಂಡಾಧಿಕಾರಿಗಳ ಹಾಗೂ ತಹಶೀಲ್ದಾರ್ ಕಚೇರಿಯ ಸೂಚನಾ ಫಲಕದ ಮೇಲೆ ಹಾಕಿ ಆಕ್ಷೇಪಣೆಗಳನ್ನು ಆಹ್ವಾನಿಸಬೇಕು. ಘೋಷಣೆಯಲ್ಲಿ ಜನ್ಮ ದಿನಾಂಕ ಖಾಯಂ ವಿಳಾಸ, ಪ್ರಸ್ತುತ ವಾಸವಿರುವ ಸ್ಥಳ, ತಂದೆ/ಗಂಡನ ಹೆಸರು, ಮೂಲ ಧರ್ಮ ಮತ್ತು ಮತಾಂತರಗೊಂಡ ಧರ್ಮ, ಅತಾಂತರದ ದಿನಾಂಕ ಸ್ಥಳ ಗುರುತಿನ ಚೀಟಿ ಆಧಾರ್ ಕಾರ್ಡ್ ಪ್ರತಿಯೊಂದೂಂದಿಗೆ ಮತ ಮತಾಂತರ ಒಳಗಾದ ಕಾರ್ಯವಿಧಾನವನ್ನು ವಿವರವಾಗಿ ಒಳಗೊಂಡಿರಬೇಕು. ಹೀಗೆ ಘೋಷಣೆಯನ್ನು ಕಳಿಸಿದ ದಿನಾಂಕದಿಂದ 21 ದಿನಾಂಕದೊಳಗೆ ಜಿಲ್ಲಾ ದಂಡಾಧಿಕಾರಿಯ ಮುಂದೆ ಹಾಜರಿರತಕ್ಕದ್ದು. ಜಿಲ್ಲಾಧಿಕಾರಿಗಳು 30 ದಿನದೊಳಗೆ ಯಾವುದೇ ಆಕ್ಷೇಪಣೆಯನ್ನು ರಿಸಿದ್ದೆ ಆದರೆ ಅವರ ಎಲ್ಲ ವಿವರಗಳನ್ನು ಆಕ್ಷೇಪಣೆಯ ಸ್ವರೂಪವನ್ನು ದಾಖಲೆ ಮಾಡಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ಮುಖಾಂತರ ವಿಚಾರಣೆಯನ್ನು ನಡೆಸತಕ್ಕದ್ದು. ಹೀಗೆ ವಿಚಾರಣೆಗೊಳಪಟ್ಟಾಗ ಕಲಂ ಮೂರರ ಅಡಿಯಲ್ಲಿ ಉಪಬಂಧಗಳ ಉಲ್ಲಂಘನೆಯಾಗಿದ್ದರೆ ಕ್ರಿಮಿನಲ್ ಮೊಕದ್ದಮೆಯ ಕ್ರಮ ಕೈಗೊಳ್ಳುವಂತೆ ಸಂಬಂಧ ಪಟ್ಟ ಪೊಲೀಸ ಅಧಿಕಾರಿಗಳಿಗೆ ಸೂಚಿಸಲಾಗುವುದು ಹಾಗೂ ಇಂತಹ ಮತಾಂತರವನ್ನು ಕಾನೂನುಬಾಹಿರ ಮತ್ತು ಅಸಿಂಧುವನ್ನಾಗಿಸುವುದು.

ಈ ವಿಧೇಯಕದ ಮುಂದಿನ ಅಂದರೆ ಕಲಂ 10 ರಿಂದ 15 ರವರೆಗೆ, ಸಂಸ್ಥೆಯ ಮೂಲಕ ಉಲ್ಲಂಘನೆಯಾದರೆ ದಂಡನೆ ಯಾವುದು, ಅಪರಾಧದ ಪಕ್ಷಕಾರರ ಬಗೆಗೆ, ರುಜುವಾತಿನ ಭಾರ ಯಾರದ್ದು, ಈ ಅಧಿನಿಯಮದ ತೊಂದರೆಗಳ ನಿವಾರಣೆ ಇತ್ಯಾದಿಗಳ ಬಗ್ಗೆ ವಿವರಿಸಲಾಗಿದೆ. ಈ ಅಧಿನಿಯಮದಲ್ಲಿ ಸಂಬಂಧಿಸಿದ ಎಲ್ಲಾ ನಮೂನೆಗಳನ್ನು ಅನುಕೂಲಕ್ಕಾಗಿ ನೀಡಲಾಗಿದೆ.

ಇವಿಷ್ಟು ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಅಧಿನಿಯಮ ಅಥವಾ ಮತಾಂತರ ನಿಷೇಧ ಕಾಯ್ದೆಯ ಬಗೆಗಾಯಿತು.

ಹಿಂದೂ ಧರ್ಮವನ್ನು ಉಲ್ಲಂಘಿತ ಮತಾಂತರಕೋರರ ಕಪಿಮುಷ್ಟಿಯಿಂದ ಕಾಪಾಡಿಕೊಳ್ಳಲು ಏನೆಲ್ಲ ಮಾಡಬಹುದು


* ಜನ ಸಾಮಾನ್ಯರಿಗೆ ನಮ್ಮ ಧರ್ಮವು ಕ್ಲಿಷ್ಟವಲ್ಲ ಸರಳ ಎಂಬುದನ್ನು ಮನವರಿಕೆ ಮಾಡಿಕೊಡಬೇಕು.
* ಭಗವದ್ಗೀತೆ, ಭಗವತದಂತಹ ಜೀವನೋಪಾಯಕ್ಕೆ ಬೇಕಾದಂತಹ ಕಥೆಗಳನ್ನು ಉಪಕಥೆಗಳನ್ನು ಸಣ್ಣ ಸಣ್ಣ ಕೈಪಿಡಿಗಳಾಗಿ ಹಂಚುವಂಥದ್ದು.
* ಧರ್ಮದ ಆಚರಣೆಗಳನ್ನು ಅಳವಡಿಸಿಕೊಳ್ಳುವಂತೆ ನಿರಂತರ ಪ್ರೇರಣೆಯನ್ನು ಒದಗಿಸುವುದು
* ನಮ್ಮ ಧರ್ಮ ಸಂಸ್ಕೃತಿಯ ಉಳಿವಿನ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಡುವುದು
* ನಾಳಿನ ಪ್ರಜೆಗಳಿಗೆ ಅಂದರೆ ಮಕ್ಕಳಿಗೆ ಸಂಸ್ಕೃತಿಯ ಪಾಠ ಪ್ರವಚನಗಳನ್ನು ಕಲಿಸುವುದು ಇತ್ಯಾದಿ ಇತ್ಯಾದಿ.

ಅಪರಾಧಕ್ಕೊಂದು ಕಾನೂನನ್ನು ತರುವುದು ಎಷ್ಟು ಮುಖ್ಯವೋ ಅಪರಾಧವಾಗದಂತೆ ತಡೆಗಟ್ಟುವುದೂ ಅಷ್ಟೇ ಮುಖ್ಯ ! ಇದಕ್ಕೆ ಧರ್ಮ ಜಾಗೃತಿಯಲ್ಲದೇ ಬೇರಾವ ಉಪಾಯವಿದೆ ?

– **ಕೌಸ್ತುಭಾ ಭಾರತಿಪುರಂ,** ವಕೀಲರು

## ಹಿಜಾಬ್ ಸುಟ್ಟು ಇರಾನ್ ಮಹಿಳೆಯರ ಪ್ರತಿಭಟನೆ

22 ವರ್ಷದ ಮಹಿಳೆ ಮಹ್ಸಾ ಅಮಿನಿ ಸಾವಿನ ನಂತರ ಇರಾನ್ನಲ್ಲಿ ಪ್ರತಿಭಟನೆಗಳು ಭುಗಿಲೆದ್ದಿದ್ದು, ಇರಾನ್ ಮಹಿಳೆಯರು ಸಾರ್ವಜನಿಕವಾಗಿ ತಮ್ಮ ಹಿಜಾಬ್‌ಗಳನ್ನು ತೆಗೆದು ಸುಟ್ಟು ಹಾಕುತ್ತಿದ್ದಾರೆ. ಕೆಲವರು ಹಿಜಾಬ್ ತೆಗೆದು ಬಿಸಾಕುತ್ತಿದ್ದಾರೆ



ಹಿಜಾಬ್ ಧರಿಸಿಲ್ಲ ಎಂಬ ಕಾರಣಕ್ಕೆ ಅಮಿನಿ ಅವರನ್ನು ಪೊಲೀಸರು ಥಳಿಸಿ ಕೊಲೆ ಮಾಡಿದ್ದಾರೆ. ರಾಯಿಟರ್ಸ್ ವರದಿಯ ಪ್ರಕಾರ, ಕಳೆದ ವಾರ ಟೆಹ್ರಾನ್‌ನಲ್ಲಿ ಆಕೆಯನ್ನು ಬಂಧಿಸಿದ ನಂತರ ಚಿತ್ರಹಿಂಸೆ ನೀಡಲಾಗಿದೆ. ಇದರಿಂದಾಗಿ ಕೋಮಾಗೆ ಜಾರಿದ್ದ ಆಕೆ ಶುಕ್ರವಾರ ನಿಧನರಾಗಿದ್ದಾರೆ. ಈ ಘಟನೆ ಇರಾನ್ ಮಹಿಳೆಯರ ಆಕ್ರೋಶ ಭುಗಿಲೇಳುವಂತೆ ಮಾಡಿದೆ. ಸಾರ್ವಜನಿಕವಾಗಿ ಹಿಜಾಬ್ ತೆಗೆದು ಬಿಸಾಕಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಹಲವಾರು ಪ್ರತಿಭಟನೆಗಳ ವೀಡಿಯೊಗಳು ವೈರಲ್ ಆಗಿವೆ. ಕೆಲವು ವೀಡಿಯೊಗಳಲ್ಲಿ, ಪ್ರತಿಭಟನಾಕಾರರನ್ನು ಚದುರಿಸಲು ಇರಾನ್ ಪಡೆಗಳು ಅಶ್ರುವಾಯು ಬಳಸುತ್ತಿರುವುದನ್ನು ಕಾಣಬಹುದು.

ಏಳು ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು ಹಿಜಾಬ್ ಅನ್ನು ಧರಿಸಬೇಕೆಂಬ ಇರಾನಿನ ನಿಯಮಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವ ಮಹಿಳೆಯರು ಸಾಂಕೇತಿಕವಾಗಿ ತಮ್ಮ ಕೂದಲನ್ನು ಕತ್ತರಿಸಿ ತಮ್ಮ ಹಿಜಾಬ್‌ಗಳನ್ನು ಸುಟ್ಟುಹಾಕುತ್ತಿದ್ದಾರೆ.

ಮಹಿಳಾ ಹಕ್ಕು ಸಂಘಟನೆಗಳು ಇರಾನ್ ಮಹಿಳೆಯರ ಮೇಲೆ ನಡೆಸುತ್ತಿರುವ ದೌರ್ಜನ್ಯವನ್ನು ಖಂಡಿಸುತ್ತಿದ್ದಾರೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.